# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1] | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2559 |
| 2] | ಮಾನ್ಯ ಸದಸ್ಯರ ಹೆಸರು | : | ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) |
| 3] | ಉತ್ತರಿಸುವ ದಿನಾಂಕ | : | 24.03.2022 |
| 4] | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2020 ರಿಂದ ಬೆಂಗಳೂರು ನಗರದಲ್ಲಿ ಸಿವಿಲ್/ಡಿಎಆರ್ ಮತ್ತು ಕೆ.ಎಸ್.ಆರ್.ಪಿ ಘಟಕಗಳಿಗೆ ಸಂಬಂಧಿಸಿದಂತೆ ಹೊಸದಾಗಿ ನಿರ್ಮಿಸಿರುವ ಬಹುಮಹಡಿ ಪೊಲೀಸ್ ವಸತಿ ಗೃಹಗಳ ಸಂಕೀರ್ಣಗಳೆಷ್ಟು; ಸದರಿ ಪೊಲೀಸ್ ವಸತಿ ಸಂಕೀರ್ಣಗಳಲ್ಲಿ ಇರುವ ವಸತಿ ಗೃಹಗಳ ಸಂಖ್ಯೆಗಳೆಷ್ಟು; | 2020 ರಿಂದ ಬೆಂಗಳೂರು ನಗರದಲ್ಲಿ ಸಿವಿಲ್/ಸಿಎಆರ್ ಮತ್ತು ಕೆ.ಎಸ್.ಆರ್.ಪಿ ಘಟಕಗಳಲ್ಲಿ ಹೊಸದಾಗಿ ನಿರ್ಮಿಸಿರುವ **ಒಟ್ಟು 39** ಬಹುಮಹಡಿ ಪೊಲೀಸ್ ವಸತಿಗೃಹ ಸಂಕೀರ್ಣ ಬ್ಲಾಕ್‌ಗಳಲ್ಲಿ **ಒಟ್ಟು 2316** ವಸತಿ ಗೃಹಗಳಿರುತ್ತದೆ. |
| ಆ | ಪ್ರಸ್ತುತ ಆಸ್ಟಿನ್ ಟೌನ್‌ನಲ್ಲಿ ಹೊಸದಾಗಿ ನಿರ್ಮಿಸಿರುವ ಕೆ.ಎಸ್.ಆರ್.ಪಿ ಬಹುಮಹಡಿ ಪೊಲೀಸ್ ವಸತಿ ಗೃಹಗಳ ಸಂಕೀರ್ಣಗಳಲ್ಲಿ ವಾಸಿಸುತ್ತಿರುವ ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳಿಂದ ಮೇ–2020 ರಿಂದ ಫೆಬ್ರವರಿ–2022ರವರೆಗೆ ಪ್ರತಿ ತಿಂಗಳು ನಿರ್ವಹಣಾ ವೆಚ್ಚವೆಂದು ಘಟಕಾಧಿಕಾರಿಗಳು ಯಾವುದೇ ಸರ್ಕಾರಿ ಆದೇಶ /ಡಿಜಿ ಮತ್ತು ಐಜಿಪಿ ಕರ್ನಾಟಕ ರಾಜ್ಯ ಬೆಂಗಳೂರು ರವರ ಮತ್ತು ಅಡಿಷನಲ್ ಡಿಜಿಪಿ ಕೆಎಸ್‌ಆರ್‌ಪಿ ಬೆಂಗಳೂರು ರವರುಗಳ ಯಾವುದೇ ಲಿಖಿತ ಆದೇಶಗಳಿಲ್ಲದೆ ಪ್ರತಿ ತಿಂಗಳು ಪ್ರತಿ ನಿವಾಸಿಗಳಿಂದ ತಲಾ ರೂ.1000/- ರಿಂದ 2000/- ರವರೆಗೆ ಹಣವನ್ನು ವಸೂಲಿ ಮಾಡಿ ಲಕ್ಷಾಂತರ ರೂಪಾಯಿಗಳು ದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | 1ನೇ ಪಡೆ ಕೆ.ಎಸ್.ಆರ್.ಪಿ., ಬೆಂಗಳೂರು ಘಟಕದ ಅಧೀನದಲ್ಲಿ ಆಸ್ಟಿನ್ ಟೌನ್ ಬಹುಮಹಡಿ ವಸತಿ ಗೃಹದಲ್ಲಿ ಒಟ್ಟು 192 ವಸತಿ ಗೃಹಗಳಿದ್ದು, ಸದರಿ ವಸತಿ ಗೃಹಗಳಿಗೆ ಮಾಸಿಕವಾಗಿ ಬರುವ Common Area Light, Street and lift Charges (Bills), Water Charges (Bills), Cleaning of Stair Case Charges (Bills), STP Maintenance Charges and Disel Purchase for Generator ಗಳಿಗೆ ತಗಲುವ ಮಾಸಿಕ ವೆಚ್ಚವನ್ನು ಸರ್ಕಾರದಿಂದ ಭರಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ ಹಾಗೂ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗುವುದಿಲ್ಲ.<br><br>ಈ ವಸತಿ ಗೃಹವು ಬಹುಮಹಡಿ ಕಟ್ಟಡವಾಗಿದ್ದರಿಂದ ಸದರಿ ನಿರ್ವಹಣಾ ವೆಚ್ಚವನ್ನು ವಸತಿ ಗೃಹಗಳಲ್ಲಿನ ನಿವಾಸಿಗಳೇ ಭರಿಸಬೇಕಾಗಿರುತ್ತದೆ ಅಲ್ಲದೇ ಸರ್ಕಾರದ ಇತರೆ ಬಹುಮಹಡಿ ವಸತಿ ಗೃಹಗಳಲ್ಲಿ ಕೂಡಾ ಇದೇ ಮಾದರಿ ಅನುಸರಿಸಲಾಗುತ್ತಿದೆ. ಆದ್ದರಿಂದ ಅಧ್ಯಕ್ಷರು/ಕಮಾಂಡೆಂಟ್, 1ನೇ ಪಡೆ ರವರ ಪದನಾಮದಲ್ಲಿ ಬ್ಯಾಂಕ್ ಖಾತೆಯನ್ನು ತೆರೆದು ಖರ್ಚು ವೆಚ್ಚಗಳನ್ನು ನಿರ್ವಹಿಸಲಾಗುತ್ತಿದೆ.<br><br>ಈ ಸಂಬಂಧ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಕರ್ನಾಟಕ ರಾಜ್ಯ ಮೀಸಲು ಪೊಲೀಸ್., ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:04–03–2020 ರಂದು ನಡೆದ ಸಭೆಯ ನಡವಳಿಗಳನ್ವಯ (ಪ್ರತಿ ಲಗತ್ತಿಸಿದೆ) ಸೇವೆಗಳಿಗೆ (ನಿರ್ವಹಣಾ ವೆಚ್ಚ) ಸಂಬಂಧಿಸಿದ ಶುಲ್ಕವನ್ನು ವಸತಿ ಗೃಹಗಳ ನಿವಾಸಿಗಳಿಂದ ಪಾವತಿಸಿಕೊಂಡು, ಸಂಬಂಧಪಟ್ಟ ಸಂಸ್ಥೆಗಳಿಗೆ ಭರಿಸುವಂತೆ ನಿರ್ಧರಿಸಲಾಯಿತು. |

...2

| | | |
|---|---|---|
| | | ಅದರಂತೆ ವಸತಿ ಸಮುಚ್ಚಯದಲ್ಲಿ ವಾಸವಾಗಿರುವ ನಿವಾಸಿಗಳ ಒಂದು ಕಮಿಟಿಯನ್ನು ರಚನೆ ಮಾಡಿದ್ದು, ಸದರಿ ರಹವಾಸಿಗಳನ್ನೊಳಗೊಂಡ ಕಮೀಟಿಯವರೇ ಪ್ರತಿ ಮಾಹೆ ಪಾವತಿಸಬೇಕಾದ ನಿರ್ವಹಣಾ ಶುಲ್ಕದ ಬಗ್ಗೆ ನಿರ್ಧರಿಸಿ, ಅವರುಗಳೇ ನಿರ್ವಹಣಾ ಶುಲ್ಕವನ್ನು ಸಂಗ್ರಹಿಸಿಕೊಂಡು ಬ್ಯಾಂಕ್ ಖಾತೆಗೆ ಜಮೆ ಮಾಡಿ, ನಂತರ ಹೊರಗುತ್ತಿಗೆ ಸಂಸ್ಥೆ ಮತ್ತು ಇತರೆ ಸಂಬಂಧಪಟ್ಟ ಸಂಸ್ಥೆಗಳಿಗೆ ಚೆಕ್ ಮುಖಾಂತರ ಪಾವತಿಸಲಾಗುತ್ತಿದೆ. ಬ್ಯಾಂಕ್ ಖಾತೆಯ ಮುಖಾಂತರ ನಿರ್ವಹಣೆಯಾಗುತ್ತಿರುವದರಿಂದ ಹಣ ದುರುಪಯೋಗ ಪಡಿಸಿಕೊಂಡಿರುವ ಪ್ರಕರಣ ಕಂಡುಬಂದಿರುವುದಿಲ್ಲ.<br><br>ಸದರಿ ಬಹುಮಹಡಿ ವಸತಿ ಗೃಹವು ಸರ್ಕಾರದ ಸ್ವತ್ತಾಗಿರುವುದರಿಂದ, ವಸತಿ ಸಮುಚ್ಚಯದ ದೈನಂದಿನ ಎಲ್ಲಾ ಆಗೂ-ಹೋಗುಗಳನ್ನು ಮೇಲುಸ್ತುವಾರಿ ನೋಡಿಕೊಳ್ಳಲು 1ನೇ ಪಡೆಯಿಂದ ಆರ್.ಪಿ.ಐ ದರ್ಜೆಯ ಒಬ್ಬ ಅಧಿಕಾರಿ ರವರನ್ನು ನೇಮಿಸಲಾಗಿರುತ್ತದೆ. |
| ಇ | ಬಂದಿದ್ದಲ್ಲಿ ಸರ್ಕಾರದ ಆದೇಶಗಳಿಲ್ಲದೆ ಬಹುಮಹಡಿ ಪೋಲೀಸ್ ವಸತಿ ಗೃಹಗಳ ನಿವಾಸಿಗಳಿಂದ ಏಕಪಕ್ಷೀಯವಾಗಿ ಸರ್ವಾಧಿಕಾರಿಯಂತೆ ವರ್ತಿಸಿ, ನಿಯಮಾವಳಿಗಳ ವಿರುದ್ಧವಾಗಿ ಲಕ್ಷಾಂತರ ರೂಪಾಯಿಗಳನ್ನು ವಸೂಲಿ ಮಾಡಿ, ಅಧಿಕಾರ ದುರುಪಯೋಗ ಮಾಡಿಕೊಂಡ ಘಟಕಾಧಿಕಾರಿಗಳ ಮೇಲೆ ಕ್ರಮವಹಿಸಲಾಗುವುದೇ | ಹಣ ದುರುಪಯೋಗ ಪಡಿಸಿಕೊಂಡಿರುವ ಪ್ರಕರಣ ಕಂಡುಬಂದಿರುವುದಿಲ್ಲವಾದ್ದರಿಂದ ಈ ವಿಷಯವು ಅನ್ವಯಿಸುವುದಿಲ್ಲ |
| ಈ | ರಾಜ್ಯದ ಇತರೆ ಯಾವ ಯಾವ ಘಟಕಗಳಲ್ಲಿರುವ ಬಹುಮಹಡಿ ಪೊಲೀಸ್ ವಸತಿ ಗೃಹಗಳ ಸಂಕೀರ್ಣಗಳಿವೆ; ಸದರಿ ಪೊಲೀಸ್ ವಸತಿ ಸಂಕೀರ್ಣಗಳಲ್ಲಿ ಇರುವ ವಸತಿಗೃಹಗಳ ಸಂಖ್ಯೆಗಳೆಷ್ಟು; ಯಾವ ಯಾವ ಘಟಕಗಳಲ್ಲಿ ವಸತಿ ಗೃಹಗಳ ನಿರ್ವಹಣೆ ಅಥವಾ ಇತರೆ ಕಾರಣಗಳಿಂದ ಪ್ರತಿ ವಸತಿ ಗೃಹಗಳ ನಿವಾಸಿಗಳಿಂದ ಪ್ರತಿ ತಿಂಗಳು ವಸೂಲಿ ಮಾಡುತ್ತಿರುವ ಹಣವೆಷ್ಟು? (ದಾಖಲೆಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಇತರೆ ಘಟಕಗಳಲ್ಲಿರುವ ಬಹುಮಹಡಿ ಪೊಲೀಸ್ ವಸತಿ ಗೃಹಗಳ ಸಂಕೀರ್ಣಗಳು ಹಾಗೂ ಸದರಿ ಪೊಲೀಸ್ ವಸತಿ ಸಂಕೀರ್ಣಗಳಲ್ಲಿ ಇರುವ ವಸತಿಗೃಹಗಳ ಸಂಖ್ಯೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.<br><br>(ಕೋಷ್ಟಕ ಕೆಳಗೆ)<br><br>ದಾವಣಗೆರೆ ನಗರದ ಡಿಎಆರ್ ವಸತಿ ಸಮುಚ್ಚಯದಲ್ಲಿ 6 ಬಹುಮಹಡಿಗಳ ವಸತಿ ಸಂಕೀರ್ಣಗಳಿದ್ದು ಅದರಲ್ಲಿ 232 ವಸತಿ ಗೃಹಗಳಿರುತ್ತವೆ. ಪ್ರತಿ ತಿಂಗಳು 256 ಮನೆಗಳಿಂದ ರೂ.1000/-ಗಳಂತೆ ನಿರ್ವಹಣಾ ವೆಚ್ಚ ವಸೂಲಿ ಮಾಡಲಾಗುತ್ತಿದ್ದು, ಬಂದಂತಹ ಹಣವನ್ನು ಡಿವೈಎಸ್‌ಪಿ ಆರ್ಮಡ್ ಡಿಎಆರ್ ರವರ ಹೆಸರಿನಲ್ಲಿ ಕೆನರಾ ಬ್ಯಾಂಕ್‌ನಲ್ಲಿ (ಖಾತೆ ಸಂಖ್ಯೆ:1064101021685) ಖಾತೆ ತೆರೆದು ಜಮಾ ಮಾಡಲಾಗುತ್ತಿದೆ.(ಪ್ರತಿ ಲಗತ್ತಿಸಿದೆ). |

| ಕ್ರ ಸಂ. | ಘಟಕ | ವಸತಿ ಗೃಹಗಳ ಸಂಕೀರ್ಣಗಳು | ಒಟ್ಟು ವಸತಿಗೃಹಗಳು |
|---|---|---|---|
| 1 | ಮಂಗಳೂರು ನಗರ | 3 | 160 |
| 2 | ದಕ್ಷಿಣ ಕನ್ನಡ | 2 | 96 |
| 3 | ದಾವಣಗೆರೆ | 4 | 232 |
| 4 | ಉಡುಪಿ | 1 | 56 |
| | ಒಟ್ಟು | **10** | **544** |

| | | |
|---|---|---|
| | | 1ನೇ ಪಡೆ ಕೆ.ಎಸ್.ಆರ್.ಪಿ., ಬೆಂಗಳೂರು ಘಟಕದ ಅಧೀನದಲ್ಲಿ ಆಸ್ಟಿನ್ ಟೌನ್ ಬಹುಮಹಡಿ ವಸತಿ ಗೃಹದಲ್ಲಿ ಒಟ್ಟು 192 ವಸತಿ ಗೃಹಗಳಿದ್ದು., ಸದರಿ ವಸತಿ ಗೃಹಗಳಿಗೆ ಮಾಸಿಕವಾಗಿ ಬರುವ Common Area Light, Street and lift Charges (Bills), Water Charges (Bills), Cleaning of Stair Case Charges (Bills), STP Maintenance Charges and Disel Purchase for Generator ಗಳಿಗೆ ತಗಲುವ ಮಾಸಿಕ ವೆಚ್ಚವನ್ನು ಸರ್ಕಾರದಿಂದ ಭರಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ ಹಾಗೂ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗುವುದಿಲ್ಲ. ಈ ವಸತಿ ಗೃಹವು ಬಹುಮಹಡಿ ಕಟ್ಟಡವಾಗಿದ್ದರಿಂದ ಸದರಿ ನಿರ್ವಹಣಾ ವೆಚ್ಚವನ್ನು ವಸತಿ ಗೃಹಗಳಲ್ಲಿನ ನಿವಾಸಿಗಳೇ ಭರಿಸಬೇಕಾಗಿರುತ್ತದೆ ಆದ್ದರಿಂದ ಅಧ್ಯಕ್ಷರು/ಕಮಾಂಡೆಂಟ್, 1ನೇ ಪಡೆ ರವರ ಪದನಾಮದಲ್ಲಿ ಬ್ಯಾಂಕ್ ಖಾತೆಯನ್ನು ತೆರೆದು ಖರ್ಚು ವೆಚ್ಚಗಳನ್ನು ನಿರ್ವಹಿಸಲಾಗುತ್ತಿದೆ. ಈ ಸಂಬಂಧ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್ ಕರ್ನಾಟಕ ರಾಜ್ಯ ಮೀಸಲು ಪೊಲೀಸ್., ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:04-03-2020 ರಂದು ನಡೆದ ಸಭೆಯ ನಡವಳಿಗಳನ್ವಯ (ಪ್ರತಿ ಲಗತ್ತಿಸಿದೆ) ಸೇವೆಗಳಿಗೆ (ನಿರ್ವಹಣಾ ವೆಚ್ಚ) ಸಂಬಂಧಿಸಿದ ಶುಲ್ಕವನ್ನು ವಸತಿ ಗೃಹಗಳ ನಿವಾಸಿಗಳಿಂದ ಪಾವತಿಸಿಕೊಂಡು, ಸಂಬಂಧಪಟ್ಟ ಸಂಸ್ಥೆಗಳಿಗೆ ಭರಿಸುವಂತೆ ನಿರ್ಧರಿಸಲಾಯಿತು.<br><br>ಮೇಲ್ಕಂಡ ಘಟಕಗಳನ್ನು ಹೊರತುಪಡಿಸಿ ರಾಜ್ಯದ ಇನ್ನಿತರೆ ಘಟಕಗಳಲ್ಲಿ ವಸತಿಗೃಹಗಳ ಸಮುಚ್ಚಯಗಳಲ್ಲಿ ವಾಸಿಸುವ ನಿವಾಸಿಗಳಿಂದ ವಿದ್ಯುತ್ ಮತ್ತು ನೀರಿನ ಬಿಲ್ಲುಗಳನ್ನು ಪಾವತಿಸುವ ಸಲುವಾಗಿ ಹಣವನ್ನು ಸಂಗ್ರಹಿಸಿ ಸಂಬಂಧಪಟ್ಟ ಸಂಸ್ಥೆಗೆ ಪಾವತಿಸಲಾಗುತ್ತಿರುತ್ತದೆ ಹಾಗೂ ಇತರೇ ಕಾರಣಗಳಿಂದ ವಸತಿಗೃಹ ನಿವಾಸಿಗಳಿಂದ ಯಾವುದೇ ಹಣ ವಸೂಲಾತಿ ಮಾಡಲಾಗುತ್ತಿರುವುದಿಲ್ಲ. |

**ಸಂಖ್ಯೆ: ಹೆಚ್‌ಡಿ 44 ಪಿಬಿಎಲ್ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು

NR-81 GR-400

**ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 04-03-2020 ರಂದು ನಡೆದ ಸಭೆಯ ನಡವಳಿಗಳು**

1746
13/3/20

**ಉಪಸ್ಥಿತರು:**

1. ಶ್ರೀ ಅಲೋಕ್ ಕುಮಾರ್, ಐಪಿಎಸ್, ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಕೆಎಸ್ಆರ್‌ಪಿ, ಬೆಂಗಳೂರು.
2. ಶ್ರೀ ಎನ್. ಸತೀಶ್‌ಕುಮಾರ್, ಐಪಿಎಸ್, ಡಿ.ಐ.ಜಿ.ಪಿ., ಕೆ.ಎಸ್.ಆರ್.ಪಿ., ಬೆಂಗಳೂರು.
3. ಶ್ರೀ ಅಜಯ್ ಹಿಲೋರಿ, ಐಪಿಎಸ್, ಕಮಾಂಡೆಂಟ್, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು
4. ಶ್ರೀ ಎಸ್. ಗಿರೀಶ್, ಐಪಿಎಸ್, ಕಮಾಂಡೆಂಟ್, 9ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು
5. ಶ್ರೀ ಎಂ.ವಿ. ರಾಮಕೃಷ್ಣಪ್ರಸಾದ್, ಕಮಾಂಡೆಂಟ್, 3ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು.
6. ಶ್ರೀ ಕೆ.ಎಸ್. ರಘುನಾಥ, ಕಮಾಂಡೆಂಟ್, 4ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು
7. ಶ್ರೀ ಎನ್.ಎಸ್. ಪ್ರಕಾಶ್, ಸಹಾಯಕ ಕಮಾಂಡೆಂಟ್, 1ನೇ ಪಡೆ, ಕೆಎಸ್ಆರ್‌ಪಿ, ಬೆಂಗಳೂರು

1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ಘಟಕದ ಅಧೀನದಲ್ಲಿ ಅಸ್ಟಿನ್‌ಟೌನ್ ಜಮೀನಿನಲ್ಲಿ ಒಟ್ಟು 192 ವಸತಿಗೃಹಗಳುಳ್ಳ ಬಹುಮಹಡಿ ಕಟ್ಟಡವನ್ನು ಹೊಸದಾಗಿ ನಿರ್ಮಿಸಲಾಗಿರುತ್ತದೆ. ಸದರಿ ವಸತಿಗೃಹಗಳನ್ನು ಬೆಂಗಳೂರಿನ ಕೆ.ಎಸ್.ಆರ್.ಪಿ. ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಹಂಚಿಕೆ ಮಾಡಲು ಸಿದ್ಧವಾಗಿರುತ್ತದೆ.

13/3/2020

ಅದರಂತೆ ಈ ಕೆಳಕಂಡಂತೆ ವಸತಿಗೃಹಗಳನ್ನು ಹಂಚಿಕೆ ಮಾಡಲು ತೀರ್ಮಾನಿಸಲಾಯಿತು.

| ಕ್ರ. ಸಂ. | ವಿವರ | ವಸತಿಗೃಹಗಳ ಸಂಖ್ಯೆ |
|---|---|---|
| 1. | 1ನೇ ಪಡೆಯ ಸಹಾಯಕ ಕಮಾಂಡೆಂಟ್, ಆರ್.ಪಿ.ಐ., ಆರ್.ಎಸ್.ಐ., ಎ.ಆರ್.ಎಸ್.ಐ., ಆರ್.ಹೆಚ್.ಸಿ., ಆರ್.ಪಿ.ಸಿ., ಅನುಯಾಯಿ ಜಮೇದಾರ್ / ಅನುಯಾಯಿಗಳಿಗೆ | 167 |
| 2. | 3ನೇ ಪಡೆಯ ಎ.ಆರ್.ಎಸ್.ಐ.ಗಳಿಗೆ | 08 |
| 3. | 4ನೇ ಪಡೆಯ ಎ.ಆರ್.ಎಸ್.ಐ.ಗಳಿಗೆ | 08 |
| 4. | 1ನೇ ಪಡೆಯ ಸಿ.ಪಿ.ಸಿ. ಕ್ಯಾಂಟೀನ್, ಜಿಮ್, ಪಡೆಯ ಕಛೇರಿ, ಹೊರಗುತ್ತಿಗೆ ಸಂಸ್ಥೆಯ ಕಛೇರಿಗೆ | 04 |
| 5. | ಆಪಿಕ ಸಿಬ್ಬಂದಿಗಳಿಗೆ | 03 |
| 6. | ಕ್ರೀಡಾ ನಿಯಂತ್ರಣ ಮಂಡಳಿಗೆ | 01 |
| 7. | ಪೊಲೀಸ್ ಪಬ್ಲಿಕ್ ಸ್ಕೂಲ್‌ಗೆ | 01 |
| | ಒಟ್ಟು | 192 |

ಮುಂದುವರೆದಿದೆ..

ಮೇಲ್ಕಂಡಂತೆ ವಸತಿಗೃಹಗಳನ್ನು ಕೆ.ಎಸ್.ಆರ್.ಪಿ. ಅಧಿಕಾರಿ / ಸಿಬ್ಬಂದಿಗಳಿಗೆ ಹಂಚಿಕೆ ಮಾಡುವಾಗ ಸೇವಾ ಜೇಷ್ಠತೆಯ ಪ್ರಕಾರವೇ ಕಡ್ಡಾಯವಾಗಿ ಮಾಡತಕ್ಕದ್ದು. ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಒಂದು ವೇಳೆ 3 ಮತ್ತು 4ನೇ ಪಡೆಯ ಯಾವುದೇ ಎ.ಆರ್.ಎಸ್.ಐ.ಗಳು ಸದರಿ ವಸತಿಗೃಹಗಳನ್ನು ಪಡೆದುಕೊಳ್ಳಲು ಇಚ್ಛಿಸದಿದ್ದರೆ, ಸದರಿ ವಸತಿಗೃಹಗಳನ್ನು 1ನೇ ಪಡೆಯ ಅಧೀನಕ್ಕೆ ವಾಪಸ್ ಹಿಂದಿರುಗಿಸುವುದು.

ವಸತಿಗೃಹಗಳನ್ನು ಹಂಚಿಕೆ ಮಾಡುವ ಪೂರ್ವದಲ್ಲಿ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹಂಚಿಕೆ ಮಾಡಲು ತೀರ್ಮಾನಿಸಲಾಯಿತು.

1) ವಸತಿಗೃಹಗಳನ್ನು ಪಡೆದುಕೊಳ್ಳುವ ಯಾವುದೇ ಅಧಿಕಾರಿ / ಸಿಬ್ಬಂದಿಗಳ ಕುಟುಂಬ. ಸದಸ್ಯರು ಯಾವುದೇ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರತಕ್ಕದ್ದಲ್ಲ.

2) ವಸತಿಗೃಹಗಳನ್ನು ಪಡೆದುಕೊಳ್ಳುವ ಯಾವುದೇ ಅಧಿಕಾರಿ / ಸಿಬ್ಬಂದಿಗಳು ಅಥವಾ ಅವರ ಕುಟುಂಬ ಸದಸ್ಯರು ಯಾರಾದರೂ ವಾಣಿಜ್ಯ ವಾಹನಗಳನ್ನು ಅಂದರೆ, ಆಟೋ, ಟೆಂಪೊ, ಓಲಾ/ಉಬರ್ ಟ್ಯಾಕ್ಸಿಗಳನ್ನು ಹೊಂದಿದ್ದರೆ, ಕಮಾಂಡೆಂಟ್ ರವರ ಲಿಖಿತ ಅನುಮತಿಯೊಂದಿಗೆ ಕಟ್ಟಡದ ಆವರಣದಲ್ಲಿ ನಿಲ್ಲಿಸಲು ಅವಕಾಶ ನೀಡುವುದು.

3) ಈಗಾಗಲೇ ವಸತಿಗೃಹಗಳನ್ನು ಹೊಂದಿ ಹೊಸ ವಸತಿಗೃಹಗಳಿಗೆ ಬರುತ್ತಿರುವ ಅಧಿಕಾರಿ / ಸಿಬ್ಬಂದಿಗಳು ಹಿಂದಿನ ವಸತಿಗೃಹಗಳ ವಿದ್ಯುತ್ ಮತ್ತು ನೀರಿನ ಬಾಕಿ ಉಳಿಸಿಕೊಂಡಿಲ್ಲದ ಬಗ್ಗೆ ಖಚಿತಪಡಿಸಿಕೊಳ್ಳುವುದು.

4) ಈ ಕಟ್ಟಡದ ನಿರ್ವಹಣೆಗಾಗಿ ಕಾನೂನು ರೀತ್ಯಾ "ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್" ಅಡಿಯಲ್ಲಿ ದಿನಾಂಕ 21-03-2020 ರೊಳಗಾಗಿ ನೊಂದಣಿ ಮಾಡಿಸುವುದು. ಕಾನೂನು ರೀತ್ಯಾ ರಚಿಸಿ ನೊಂದಣಿ ಮಾಡಿಸಲಾಗುವುದರಿಂದ ಬೈಲಾದ ಯಾವುದೇ ನಿಯಮ, ಷರತ್ತುಗಳು ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು.

ಮುಂದುವರೆದಿದೆ..

3 ⑩



5) ಕಟ್ಟಡದ ಆವರಣ, ವಸತಿಗೃಹಗಳ ಕಾರಿಡಾರ್, ಎಲ್ಲಾ ಮಹಡಿಗಳ ಮೆಟ್ಟಿಲುಗಳ ಶುಚಿತ್ವ ಕಾಪಾಡಲು, ಭದ್ರತಾ ಕರ್ತವ್ಯ, ನೀರು ಸರಬರಾಜು, ಲಿಫ್ಟ್ ನಿರ್ವಹಣೆ, ವಸತಿಗೃಹಗಳನ್ನು ಹೊರತುಪಡಿಸಿ ಹೊರಗಿನ ವಿದ್ಯುತ್ ಸರಬರಾಜು ಮುಂತಾದವುಗಳನ್ನು ನಿರ್ವಹಣೆ ಮಾಡಲು ನಿಯಮಾನುಸಾರ ಹೊರಗುತ್ತಿಗೆ ಸಂಸ್ಥೆಯನ್ನು ದಿನಾಂಕ 18-03-2020 ರೊಳಗಾಗಿ ಆಯ್ಕೆ ಮಾಡುವುದು.

6) ಪ್ರತಿ ತಿಂಗಳು ಎಲ್ಲಾ ವಸತಿಗೃಹಗಳ ನೀರು ಮತ್ತು ವಿದ್ಯುತ್ ಬಿಲ್ಲು ಶುಲ್ಕಗಳನ್ನು ಬಾಕಿ ಇಲ್ಲದಂತೆ ಸಂಬಂಧಪಟ್ಟ ಸಂಸ್ಥೆಗಳಿಗೆ ಪಾವತಿ ಮಾಡುವುದು.

7) ಪ್ರತಿ ತಿಂಗಳು ಎಲ್ಲಾ ವಸತಿಗೃಹಗಳಿಂದ ಕ್ರಮ ಸಂಖ್ಯೆ-5 ರಲ್ಲಿ ತಿಳಿಸಿರುವ ಸೇವೆಗಳಿಗೆ ಸಂಬಂಧಿಸಿದ ಶುಲ್ಕವನ್ನು ಪಾವತಿಸಿಕೊಂಡು ಯಾವುದೇ ಬಾಕಿ ಇಲ್ಲದಂತೆ ಸಂಬಂಧಪಟ್ಟ ಸಂಸ್ಥೆಗೆ ಪಾವತಿ ಮಾಡುವುದು. ಈ ಎಲ್ಲಾ ಶುಲ್ಕಗಳನ್ನು ಪಾವತಿ ಮಾಡುವುದಾಗಿ ವಸತಿಗೃಹಗಳನ್ನು ಹಂಚಿಕೆ ಪಡೆದುಕೊಂಡ ಎಲ್ಲಾ ಅಧಿಕಾರಿ / ಸಿಬ್ಬಂದಿಗಳಿಂದ ಮುಚ್ಚಳಿಕೆ ಪತ್ರಗಳನ್ನು ಪಡೆದುಕೊಳ್ಳಲು ನಿರ್ಧರಿಸಲಾಯಿತು.

(ಆಲೋಕ್ ಕುಮಾರ್, ಐಪಿಎಸ್)
ಅಡಿಷನಲ್ ಡೈರೆಕ್ಟರ್.ಜನರಲ್ ಆಫ್ ಪೊಲೀಸ್,
ಕೆ.ಎಸ್.ಆರ್.ಪಿ., ಬೆಂಗಳೂರು.

(ಎನ್. ಸತೀಶ್‌ಕುಮಾರ್, ಐಪಿಎಸ್)
ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್,
ಕೆ.ಎಸ್.ಆರ್.ಪಿ., ಬೆಂಗಳೂರು.

(ಅಜಯ್ ಹಿಲೋರಿ, ಐಪಿಎಸ್)
ಕಮಾಂಡೆಂಟ್, 1ನೇ ಪಡೆ,
ಕೆ.ಎಸ್.ಆರ್.ಪಿ., ಬೆಂಗಳೂರು

(ಎಸ್. ಗಿರೀಶ್, ಐಪಿಎಸ್)
ಕಮಾಂಡೆಂಟ್, 9ನೇ ಪಡೆ,
ಕೆ.ಎಸ್.ಆರ್.ಪಿ, ಬೆಂಗಳೂರು

(ಎಲ್.ವಿ. ರಾಮಕೃಷ್ಣಪ್ರಸಾದ್)
ಕಮಾಂಡೆಂಟ್, 3ನೇ ಪಡೆ,
ಕೆ.ಎಸ್.ಆರ್.ಪಿ., ಬೆಂಗಳೂರು.

(ಕೆ.ಎಸ್. ರಘುನಾಥ)
ಕಮಾಂಡೆಂಟ್, 4ನೇ ಪಡೆ,
ಕೆ.ಎಸ್.ಆರ್.ಪಿ., ಬೆಂಗಳೂರು.

(ಎನ್.ಎಸ್. ಪ್ರಕಾಶ್)
ಸಹಾಯಕ ಕಮಾಂಡೆಂಟ್,
1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು.

81
1845 Hrs
18/03/2022